## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–7458/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 22/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಸದಾಶಿವ ಶೆಟ್ಟಿ, ಕಾರ್ಯದರ್ಶಿ, ಹೇರೂರು ನಾಗರೀಕ ಹೋರಾಟ ಸಮಿತಿ, ಬ್ರಹ್ಮಾವರ, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಸದಾಶಿವ ಶೆಟ್ಟಿ, ಕಾರ್ಯದರ್ಶಿ, ಹೇರೂರ ನಾಗರೀಕ ಹೋರಾಟ ಸಮಿತಿ ಇವರು ಗೌರವಾನ್ವಿತ ಲೋಕಾಯುಕ್ತರ ಉಡುಪಿಯ ಕ್ಯಾಂಪಿನಲ್ಲಿ ಸಲ್ಲಿಸಿದ ದೂರಿನಲ್ಲಿ ಬ್ರಹ್ಮಾವರ ಪ್ರದೇಶದ ಚಾಂತಾರು ಗ್ರಾಮ ಪಂಚಾಯತಿ ಆಡಳಿತಕ್ಕೆ ಒಳಪಡುವ 52ನೇ ಹೇರೂರು ಗ್ರಾಮದ ಸರ್ವೇ ನಂ.171/106 ರಲ್ಲಿ 1992–93 ರಲ್ಲಿ 44 ಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿತ್ತು. ಸದರಿ ನಿವೇಶನ ಹಂಚಿಕೆ ಮಾಡುವ ಸರ್ಕಾರದ ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರಿ ಬ್ರಹ್ಮಾವರ ಹೆಬ್ರಿಗೆ ಹೋಗುವ ಮುಖ್ಯ ರಸ್ತೆಗೆ ತಾಗಿದಂತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ನಿವೇಶನ ಪಡೆದ ಫಲಾನುಭವಿಗಳು ಈಗಾಗಲೇ ಮನೆ ಆಸ್ತಿ ಪಾಸ್ತಿ ಹೊಂದಿರುವ ಸ್ಥಿತಿವಂತರಾಗಿರುತ್ತಾರೆ. ಸರ್ಕಾರದಿಂದ ಅಕ್ರಮ ಸಕ್ರಮದಡಿಯಲ್ಲಿ 5 ಎಕರೆ ಭೂಮಿ ಮಂಜೂರಾದಂತಹ ವ್ಯಕ್ತಿಗಳಿಗೆ ನಿವೇಶನ ನೀಡಲಾಗಿದೆ. 52ನೇ ಹೇರೂರು ಗ್ರಾಮದಲ್ಲಿ ಈಗಾಗಲೇ ಸರ್ಕಾರದಿಂದ ನಿವೇಶನ ಪಡೆದ ವ್ಯಕ್ತಿಗಳು ಮತ್ತೆ ನಿವೇಶನ ಪಡೆದಿರುತ್ತಾರೆ. ಕಳೆದ 20 ವರ್ಷಗಳಿಂದ ನಿವೇಶನ ಖಾಲಿ ಬಿಟ್ಟಿದ್ದು, ಈಗ ನಿವೇಶನ ಜಾಗವನ್ನು ಮಾರಾಟ ಮಾಡುವ ಹುನ್ನಾರದಲ್ಲಿರುತ್ತಾರೆ. ಸರ್ಕಾರ ನಿವೇಶನ ನೀಡುವಾಗ ಷರತ್ತುಗಳನ್ನು ವಿದಿಸಿದ್ದು, ನಿವೇಶನ ಪಡೆಯುವ ವ್ಯಕ್ತಿಯು ಹೇರೂರು ಗ್ರಾಮದಲ್ಲಿ ಹೆಚ್ಚಿನ ವರ್ಷದ ಅವಧಿಗೆ ವಾಸವಾಗಿರಬೇಕು, ನಿವೇಶನ ಪಡೆದ ವ್ಯಕ್ತಿಗೆ ಬೇರೆ ಕಡೆ ನಿವೇಶನ ಅಥವಾ ಮನೆ ಹೊಂದಿರಬಾರದು, ನಿವೇಶನ ಪಡೆದ ವ್ಯಕ್ತಿ 2 ವರ್ಷಗಳಲ್ಲಿ ಗುಡಿಸಲು ಅಥವಾ ಮನೆ ನಿರ್ಮಾಣ ಮಾಡಿ ವಾಸ ಮಾಡಿಕೊಂಡಿರಬೇಕು ಎಂಬ ಷರತ್ತುಗಳನ್ನು ಉಲ್ಲಂಘನೆ ಮಾಡಲಾಗಿರುತ್ತದೆ. ಗೊತ್ತುಗುರಿ ಇಲ್ಲದೆ ಬೇನಾಮಿದಾರರಿಗೆ ಈ ನಿವೇಶನದ ಹಕ್ಕು ಪತ್ರ ವಿತರಣೆ ಮಾಡಲಾಗಿದೆ. ಕೆಲವು ಫಲಾನುಭವಿಗಳಿಗೆ ತಮಗೆ ನಿವೇಶನ ಮಂಜೂರಾಗಿರುವ ಸಂಗತಿಯೇ ಗೊತ್ತಿರುವುದಿಲ್ಲ. ಇನ್ನು ಕೆಲವು ಫಲಾನುಭವಿಗಳು ಸರ್ಕಾರಿ ನೌಕರರಾಗಿದ್ದು, ನಿವೇಶನವನ್ನು ಮಾರಾಟ ಮಾಡುವ ಹುನ್ನಾರದಲ್ಲಿರುತ್ತಾರೆ. ಇದರಿಂದ, ಅರ್ಹ ಫಲಾನುಭವಿಗಳು ನಿವೇಶನ ವಂಚಿತರಾಗಿರುತ್ತಾರೆ. ಈಗಾಗಲೇ ಹಿಂದಿನ

ತಹಶೀಲ್ದಾರ್‌ರವರು ವಿತರಣೆ ಮಾಡಲಾಗಿದ್ದ ಹಕ್ಕು ಪತ್ರಗಳನ್ನು ಮಂಜೂರಾತಿಯ ಷರತ್ತುಗಳನ್ನು ಪಾಲನೆ ಮಾಡಿಲ್ಲವೆಂಬ ಕಾರಣಕ್ಕೆ ಸರ್ಕಾರಕ್ಕೆ ಸದರಿ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿರುತ್ತದೆ. ಆದರೆ, ಈಗಿನ ಅಧಿಕಾರಿಗಳು ಪಹಣಿ ಪತ್ರಗಳನ್ನು ರದ್ದುಪಡಿಸುತ್ತಿಲ್ಲ ಹಾಗೂ ನಿವೇಶನಗಳನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳುತ್ತಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ಸದರಿ ನಿವೇಶನಗಳನ್ನು ಸರ್ಕಾರಕ್ಕೆ ಪಡೆಯಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 3ನೇ ಎದುರುದಾರರಾದ ಬ್ರಹ್ಮಾವರದ ವಿಶೇಷ ತಹಶೀಲ್ಧಾರ್‌ರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಹೇರೂರು ಗ್ರಾಮದ ಸರ್ವೇ ನಂ.171 ರಲ್ಲಿ ಹಾಗೂ ಸರ್ವೇ ನಂ.106 ರಲ್ಲಿ 1992–93 ಹಾಗೂ 1988–89ರ ಸಾಲಿನಲ್ಲಿ ಮಂಜೂರು ಮಾಡಲಾದ ನಿವೇಶನ ಹಕ್ಕುಪತ್ರದಲ್ಲಿ ಒಟ್ಟು 92 ಜನ ಮಂಜೂರಾತಿದಾರರು ನಿವೇಶನ ಮಂಜೂರಾತಿ ಷರತ್ತನ್ನು ಪೂರೈಸದೇ ಇರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಎಲ್ಲ 92 ಜನರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದು, ಇದರಲ್ಲಿ 24 ಜನ ಮಂಜೂರಾತಿ ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. ಖಾಲಿ ನಿವೇಶನಗಳ ಪ್ರಕರಣಗಳಲ್ಲಿ ನೋಟೀಸನ್ನು ನಿವೇಶನದ ಜಮೀನಿಗೆ ಅಂಟಿಸಿ ಜಾರಿ ಮಾಡಿದ್ದು, ಇಂತಹ ಪ್ರಕರಣಗಳಲ್ಲಿ ತಿಮ್ಮಕುಲಾಲ ಇವರನ್ನು ಹೊರತುಪಡಿಸಿ ಇತರೆ ಯಾರು ಸಮಜಾಯಿಷಿ ನೀಡಿರುವುದಿಲ್ಲ.

3. 4ನೇ ಎದುರುದಾರರಾದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಆಕ್ಷೇಪಣೆಯಲ್ಲಿ ಹೇರೂರು ಗ್ರಾಮದ ಸರ್ವೇನಂ.171/106 ರಲ್ಲಿನ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಚಾಂತಾರು ಮತ್ತು ಹೇರೂರು ಗ್ರಾಮದ ವ್ಯಾಪ್ತಿಯಲ್ಲಿ ಹಾದು ಹೋಗುವ ಸೀತಾನದಿ ಬ್ರಹ್ಮಾವರ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿರುತ್ತದೆ. ಇದು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಜಿಲ್ಲಾ ಮುಖ್ಯ ರಸ್ತೆಗಳಿಗೆ ರಸ್ತೆ ಮಧ್ಯಭಾಗದಿಂದ ಕಟ್ಟಡದ ರೇಖೆಯು 25.00 ಮೀ., ಒಳಗಿನ ಅಂತರದಲ್ಲಿ ಇರಬಾರದು, ಅದರಂತೆಯೇ ಇಲಾಖೆಯಿಂದ ಅನುಮತಿ ನೀಡಲಾಗುತ್ತಿದ್ದು, ಈಗ ಕರ್ನಾಟಕ ಸರ್ಕಾರದ ಆದೇಶ ಸಂ: ಪಿಡಬ್ಲ್ಯೂಡಿ262/ಸಿಆರ್/ಎಂ98 ಬೆಂಗಳೂರು ದಿ:09/10/1998ರ ಪ್ರಕಾರ 15.50 ಮೀ., ಅಂತರದೊಳಗೆ ಕಟ್ಟಡ ಇರಬಾರದು ಎಂದು ಇರುತ್ತದೆ. ಅದಕ್ಕನುಗುಣವಾಗಿ ಕಟ್ಟಡ ನಿರ್ಮಿಸಲು ಇಲಾಖೆಯಿಂದ ಅನುಮತಿ ನೀಡಲಾಗುತ್ತಿದೆ. ಆದ್ದರಿಂದ, ಅರ್ಜಿದಾರರು ಪ್ರಸ್ತಾಪಿಸಿರುವಂತೆ ಹೇರೂರು ಗ್ರಾಮದ ನಿವೇಶನಗಳ ಹಂಚಿಕೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಯಾವುದೇ ರೀತಿಯ ಕಾನೂನುಬಾಹಿರ ಕಾರ್ಯವನ್ನು ನಡೆಸಿರುವುದಿಲ್ಲ. ಇದಲ್ಲದೇ, ಇಲಾಖೆಯಿಂದ ಅನುಮತಿ ಪತ್ರ ನೀಡುವಾಗ ತಾನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರನಾಗಿ

ಕೆಲಸ ನಿರ್ವಹಿಸುತ್ತಿರಲಿಲ್ಲವೆಂದು ತಿಳಿಸಿರುತ್ತಾರೆ. ದೂರುದಾರರು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಿಂದ ಯಾವುದೇ ರೀತಿಯ ಕಾನೂನುಬಾಹಿರವಾದ ಕಾರ್ಯವನ್ನು ನಿರ್ವಹಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

4. 1ನೇ ಎದುರುದಾರರಾದ ಸಹಾಯಕ ಆಯುಕ್ತರು (ಎಸಿ) ಕುಂದಾಪುರ ಇವರು ತಮ್ಮ ಆಕ್ಷೇಪಣೆಯಲ್ಲಿ ಹೇರೂರು ಗ್ರಾಮವು ಉಡುಪಿ ತಾಲ್ಲೂಕಿನ ಬ್ರಹ್ಮಾವರ ಹೋಬಳಿಗೆ ಸೇರಿದ್ದಾಗಿದ್ದು, ಈ ಕುರಿತು ವಿಶೇಷ ತಹಶೀಲ್ದಾರ್, ಬ್ರಹ್ಮಾವರ ಇವರು ಉಡುಪಿ ತಹಶೀಲ್ದಾರ್‌ರವರಿಗೆ ಪತ್ರ ಬರೆದು ಉಡುಪಿ ತಹಶೀಲ್ದಾರ್‌ರಿಂದ ಹೇರೂರು ಗ್ರಾಮದ ಸರ್ವೇ ನಂ.106 ರಲ್ಲಿ ಹೆಚ್‌ಎಸ್‌ಡಿಆರ್ 238/88–89 ರಂತೆ 48 ಫಲಾನುಭವಿಗಳಿಗೆ ಹಾಗೂ ಸರ್ವೇ ನಂ.171ರಲ್ಲಿ ಹೆಚ್‌ಎಸ್‌ಡಿಆರ್ 207/92–93 ರಂತೆ 50 ಫಲಾನುಭವಿಗಳಿಗೆ ಒಟ್ಟು 98 ಫಲಾನುಭವಿಗಳಿಗೆ ನಿವೇಶನಗಳನ್ನು ವಿತರಿಸಲಾಗಿದ್ದು, ಅದರಲ್ಲಿ 92 ಫಲಾನುಭವಿಗಳು ಷರತ್ತನ್ನು ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ 92 ನಿವೇಶನಗಳನ್ನು ಮಂಜೂರಾತಿಯನ್ನು ರದ್ದುಪಡಿಸುವುದಕ್ಕಾಗಿ ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರರು ಕಾರಣ ಕೇಳುವ ನೋಟೀಸ್ ಜಾರಿ ಮಾಡಿರುತ್ತಾರೆ. ಅದರಲ್ಲಿ, 24 ಪಲಾನುಭವಿಗಳು ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. ಉಳಿದ 68 ಫಲಾನುಭವಿಗಳಿಗೆ ನಿವೇಶನದ ಜಮೀನಿಗೆ ನೋಟೀಸ್ ಅಂಟಿಸಿದ್ದು, ಅದರಲ್ಲಿ ಒಬ್ಬರು ಸಮಜಾಯಿಷಿ ನೀಡಿದ್ದು, ಉಳಿದ 67 ಜನರು ಸಮಜಾಯಿಷಿಗಾಗಿ ಕಾಲಾವಕಾಶವನ್ನು ಕೋರಿರುತ್ತಾರೆ ಎಂದು ತಿಳಿಸಿರುತ್ತಾರೆ.

5. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿಗೆ ಸಂಬಂಧಿಸಿದ ಅಂಶಗಳು ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರವರಿಗೆ ಸಂಬಂಧಿಸಿದ್ದಾಗಿರುತ್ತದೆ. ಆದ್ದರಿಂದ, ಸದರಿ ದೂರಿನಂಶಗಳ ಬಗ್ಗೆ ವಿಶೇಷ ತಹಶೀಲ್ದಾರ್‌ರವರಿಂದ ವರದಿ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ.

6. ಎದುರುದಾರರುಗಳ ಆಕ್ಷೇಪಣೆಯ ಮೇರೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. 92 ನಿವೇಶನ ಮಂಜೂರಾದ ಫಲಾನುಭವಿಗಳ ಪೈಕಿ ಕೇವಲ 12 ಜನ ಮಾತ್ರ ಸಮಜಾಯಿಷಿಯನ್ನು ಇಲಾಖೆಗೆ ನೀಡಿರುತ್ತಾರೆ. ಅದರಲ್ಲಿ ಕೆಲವರು ತಮಗೆ ಸರ್ಕಾರದಿಂದ ನಿವೇಶನ ಮಂಜೂರಾತಿ ಆಗಿರುವುದು ತಮಗೆ ಗೊತ್ತಿಲ್ಲವೆಂದು ಹಾಗೂ ತಮಗೆ ಹಕ್ಕು ಪತ್ರ ಮತ್ತು ಪಹಣಿ ಪತ್ರ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ನಿವೇಶನಗಳನ್ನು ಬೇಕಾಬಿಟ್ಟಿ ವಿತರಣೆ ಮಾಡಲಾಗಿದೆ. 10 ರಿಂದ 12 ಜನ ಫಲಾನುಭವಿಗಳ ಬಳಿ ಹಕ್ಕು ಪತ್ರ ಮಾತ್ರ ಇದ್ದು, ಉಳಿದಂತೆ 80 ಫಲಾನುಭವಿಗಳ ಬಳಿ ಹಕ್ಕುಪತ್ರ ಇರುವುದಿಲ್ಲ. ಯಾರ ಕೈಯಲ್ಲಿದೆ ಎಂಬುದು ಸಹ ಗೊತ್ತಿರುವುದಿಲ್ಲ. ಇದು ಲ್ಯಾಂಡ್ ಮಾಫಿಯ ಜನರ ಬಳಿ ಸೇರಿರುವುದಾಗಿ ಕಂಡು ಬಂದಿರುತ್ತದೆ. ನಿವೇಶನ ಮಂಜೂರಾಗಿ 22 ವರ್ಷಗಳು ಕಳೆದರೂ ಯಾರು ಮನೆ ಕಟ್ಟಿರುವುದಿಲ್ಲ. ರಸ್ತೆಯ ಎರಡು

ಬದಿ ರಸ್ತೆ ಮಧ್ಯದಿಂದ 25.25 ಮೀ., ನಷ್ಟು ಅಂತರದ ನಂತರ ನಿವೇಶನಗಳನ್ನು ಮಾಡಬೇಕಾಗಿದ್ದು, ಆದರೆ ನಿವೇಶನದ ಜಾಗವು 12 ರಿಂದ 15 ಮೀ., ಅಂತರದಲ್ಲಿ ಇರುವುದು ಕಂಡು ಬರುತ್ತದೆ. ಕೆಲವು ಫಲಾನುಭವಿಗಳು ಈಗಾಗಲೇ ನಿವೇಶನ ಹೊಂದಿದ್ದರೂ ಸಹ, ಅಂತಹವರಿಗೆ ನಿವೇಶನ ನೀಡಲಾಗಿರುತ್ತದೆ. ಕೆಲವರು ನಿವೇಶನಗಳನ್ನು ಮಾರಿರುತ್ತಾರೆ. ಆದ್ದರಿಂದ, ಹಕ್ಕು ಪತ್ರಗಳನ್ನು ರದ್ದುಪಡಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಹಾಗೂ ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ತಪ್ಪಿಸಬೇಕೆಂದು ಕೋರಿರುತ್ತಾರೆ.

7. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಎದುರುದಾರರೇ ಒಪ್ಪಿಕೊಂಡಂತೆ ಒಟ್ಟು 98 ಫಲಾನುಭವಿಗಳಿಗೆ 88–89 ಹಾಗೂ 92–93ನೇ ಸಾಲಿನಲ್ಲಿ ನಿವೇಶನಗಳನ್ನು ವಿತರಿಸಿರುವುದು ಸ್ಪಷ್ಟ ಪಡುತ್ತದೆ. ಹಾಗೆಯೇ ಸದರಿ 92 ನಿವೇಶನಗಳ ವಿತರಣಾ ಕಾಲದಲ್ಲಿ ನೀಡಲಾಗಿದ್ದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದ 92 ಫಲಾನುಭವಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುವುದು ಸಹ ಸ್ಪಷ್ಟ ಪಡುತ್ತದೆ. ಇದರಿಂದ, ಸದರಿ ನಿವೇಶನಗಳು ವಿತರಿಸಿ 22 ವರ್ಷಗಳಿಗೂ ಹೆಚ್ಚು ಕಾಲ ಕಳೆದಿದ್ದರೂ ಫಲಾನುಭವಿಗಳು ಷರತ್ತುಗಳನ್ವಯ ಮನೆಗಳನ್ನು ಕಟ್ಟಿಕೊಳ್ಳದೇ ಇರುವುದು ಸ್ಪಷ್ಟ ಪಟ್ಟಿರುತ್ತದೆ. ಇದಲ್ಲದೇ, ದೂರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಅನೇಕ ಫಲಾನುಭವಿಗಳೆಂದು ಹೇಳಲಾದ ವ್ಯಕ್ತಿಗಳು ತಮಗೆ ನಿವೇಶನಗಳು ಹಂಚಿಕೆಯಾಗಿರುವ ಬಗ್ಗೆ ಮಾಹಿತಿಯೇ ಇಲ್ಲವೆಂದು ತಿಳಿಸಿ, ವಿಶೇಷ ತಹಶೀಲ್ದಾರ್‌ರವರಿಗೆ ಕಾರಣ ಕೇಳುವ ನೋಟೀಸ್‌ಗೆ ಉತ್ತರಿಸಿರುವುದು ಕಂಡು ಬರುತ್ತದೆ. ಅಂತಹ ಪ್ರಕರಣಗಳಲ್ಲಿ ಶ್ರೀ ಕೃಷ್ಣ ಪೂಜಾರಿ ಬಿನ್ ತಿಮ್ಮ ಪೂಜಾರಿ ಇವರು ಫಲಾನುಭವಿಯಾಗಿದ್ದು, ಇವರು ತಮ್ಮ ಪತ್ರದಲ್ಲಿ ತನಗೆ ನಿವೇಶನ ಮಂಜೂರಾಗಿರುವ ಬಗ್ಗೆ ವಿಷಯ ಗೊತ್ತಿಲ್ಲವೆಂದು ತಿಳಿಸಿರುವುದು ಕಂಡು ಬರುತ್ತದೆ. ಹಾಗೂ ಸದರಿಯವರು ತನಗೆ ನಿವೇಶನ ಮಂಜೂರಾಗಿರುವ ಬಗ್ಗೆ ವಿಶೇಷ ತಹಶೀಲ್ದಾರ್‌ರವರಿಂದ ನೋಟೀಸ್‌ಬಂದ ನಂತರವೇ ತಿಳಿಯಿತ್ತೆಂದು ತಿಳಿಸಿರುವುದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಉದಯ ಆಚಾರಿಯವರು ಮತ್ತೊಬ್ಬ ಫಲಾನುಭವಿಯಾಗಿದ್ದು, ಇವರು ತಮ್ಮ ಪತ್ರದಲ್ಲಿ ತನಗೆ ನಿವೇಶನ ಮಂಜೂರಾಗಿರುವುದು ಗೊತ್ತಿಲ್ಲವೆಂದು ತನಗೆ ಹಕ್ಕು ಪತ್ರ ಪಹಣಿ ಇದುವರೆಗೂ ಸಿಕ್ಕಿಲ್ಲವೆಂದು ತಾನು 15 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆಂದು, ಆದ್ದರಿಂದ, ತನಗೆ ಕಂದಾಯ ಇಲಾಖೆಯಿಂದ ಬಂದ ನೋಟೀಸ್ ನೋಡಿ ಆಶ್ಚರ್ಯವಾಗಿರುತ್ತದೆ ಎಂದು ತಿಳಿಸಿರುವುದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ.

8. ಇದಲ್ಲದೇ, ನಿವೇಶನ ಹಂಚುವಾಗ ನಿವೇಶನ ಇದ್ದವರಿಗೆ ಮತ್ತೆ ಸರ್ಕಾರದಿಂದ ನಿವೇಶನ ಮಂಜೂರು ಮಾಡಲಾಗಿರುತ್ತದೆ. ಶ್ರೀಮತಿ ಜಯಂತಿ ಕೋಂ ಜಲಂಧರ್ ನಾಯ್ಕ ಇವರಿಗೆ ಉಡುಪಿಯ

ಕುಂಜಾಲುಗಟ್ಟು ಗ್ರಾಮದ ಸರ್ವೇ ನಂಬರ್ 229-1ಎ ರಲ್ಲಿ 40 x 30 ಅಳತೆಯ ನಿವೇಶನವನ್ನು ಹಂಚಿಕೆ ಮಾಡಿ, ದಿ:17/12/2012ರ ಹಕ್ಕು ಪತ್ರವನ್ನು ನೀಡಲಾಗಿರುತ್ತದೆ. ಆದರೆ, ಇವರ ಪತಿ ಜಲಂಧರ್ ನಾಯ್ಕ ಇವರಿಗೆ ಹೇರೂರು ಗ್ರಾಮದ ಸರ್ವೇ ನಂ.106ರಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ನಿವೇಶನವನ್ನು ಹಂಚಲಾಗಿರುತ್ತದೆ. ಅದರೊಳಗೆ ಅವರು ಮನೆಯನ್ನು ಸಹ ಕಟ್ಟಿರುತ್ತಾರೆ. ಈ ಬಗ್ಗೆ ಶ್ರೀಮತಿ ಜಯಂತಿಯವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಜಲಂಧರ್ ನಾಯ್ಕ ರವರಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಮಂಜೂರಾಗಿರುವ ವಸತಿಯ ಬಗೆಗಿನ ವಿವರವುಳ್ಳ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಜಯಂತಿರವರ ನಿವೇಶನದ ಹಕ್ಕು ಪತ್ರವನ್ನು ಹಾಜರುಪಡಿಸಲಾಗಿದೆ. ಶ್ರೀಮತಿ ಜಯಂತಿ ನಾಯ್ಕರವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಬರೆದುಕೊಟ್ಟಿರುವ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ವಾಸಕ್ಕೆ ಮನೆ ಇದ್ದ ವ್ಯಕ್ತಿಗಳಿಗೂ ಸಹ ನಿವೇಶನವನ್ನು ಮಂಜೂರು ಮಾಡಿರುವುದು ಕಂಡು ಬರುತ್ತದೆ. ಬಸವ ವಸತಿ ಯೋಜನೆಯಡಿಯಲ್ಲಿ ಸದರಿ ಜಲಂಧರ್ ನಾಯ್ಕರವರಿಗೆ ಸರ್ಕಾರದ ವತಿಯಿಂದ ಮನೆ ಕಟ್ಟಲು ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿಶೇಷ ತಹಶೀಲ್ದಾರ್, ಬ್ರಹ್ಮಾವರ ಇವರು ನೀಡಿರುವ ವರದಿ ಅನೇಕ ತಪ್ಪುಗಳಿಂದ ಕೂಡಿರುತ್ತದೆ. ಸದರಿಯವರು 80 ಫಲಾನುಭವಿಗಳ ಹೆಸರು ರದ್ದು ಪಡಿಸುವುದು ಸೂಕ್ತವೆಂದು ತಿಳಿಸಿರುತ್ತಾರೆ. ಆದರೆ, ಈ ಹಿಂದೆ ಕಂದಾಯ ಇಲಾಖೆಯಿಂದಲೇ ಫಲಾನುಭವಿಗಳ ಹೆಸರನ್ನು ಬ್ರಹ್ಮಾವರದ ಉಪತಹಶೀಲ್ದಾರ್‌ರವರು ಹೆಸರುಗಳನ್ನು ಸೂಚಿಸಿ, ಸದರಿ ವ್ಯಕ್ತಿಗಳು ನಿವೇಶನಕ್ಕೆ ಅರ್ಹರೆಂದು ಶಿಫಾರಸ್ಸು ಮಾಡಿರುವುದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ 1988-89 ಹಾಗೂ 1992-93ನೇ ಸಾಲಿನಲ್ಲಿ ಆಯ್ಕೆಯಾದ 98 ಪಲಾನುಭವಿಗಳ ಪೈಕಿ, 92 ಫಲಾನುಭವಿಗಳು ನಿವೇಶನಗಳನ್ನು ಸದುಪಯೋಗ ಪಡಿಸಿಕೊಳ್ಳದೇ, ನಿವೇಶನಗಳನ್ನು ಖಾಲಿ ಬಿಟ್ಟಿರುವುದು ಹಾಗೂ ನಿವೇಶನದ ಹಂಚಿಕೆಯ ಕಾಲದಲ್ಲಿ ವಿಧಿಸಲಾಗಿದ್ದ ಷರತ್ತುಗಳನ್ನು ಉಲ್ಲಂಘಿಸಿರುವುದು ಸ್ಪಷ್ಟ ಪಡುತ್ತದೆ. ಇದಲ್ಲದೇ, ಎಷ್ಟೋ ಫಲಾನುಭವಿಗಳಿಗೆ ತಮಗೆ ನಿವೇಶನಗಳು ಹಂಚಿಕೆಯಾಗಿರುವುದು ಸಹ ತಿಳಿದಿರುವುದಿಲ್ಲ. ಆದ್ದರಿಂದ, ನಿವೇಶನಗಳ ಹಂಚಿಕೆಯಲ್ಲಿ ಮೋಸವಾಗಿರುವುದಾಗಿ ಕಂಡು ಬರುತ್ತದೆ. (ಕೆಲವು ಫಲಾನುಭವಿಗಳು ತಮಗೆ ನಿವೇಶನ ಹಂಚಿಕೆಯಾಗಿರುವ ವಿಷಯವೇ ತಿಳಿದಿರಲಿಲ್ಲವೆಂದು ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರಿಂದ ನಿವೇಶನ ಹಂಚಿಕೆಯ ರದ್ದತಿ ಬಗ್ಗೆ ಬಂದ ನೋಟೀಸ್‌ನಿಂದ ತಮಗೆ ನಿವೇಶನ ಹಂಚಿಕೆಯಾಗಿರುವುದು ತಿಳಿದು ಬಂದಿತ್ತೆಂದು ಫಲಾನುಭವಿಗಳು ನೋಟೀಸ್‌ಗೆ ನೀಡಿರುವ ಉತ್ತರದಿಂದ ಕಂಡು ಬರುತ್ತದೆ.).

9. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಮೇಲೆ ತಿಳಿಸಿದ ಹೇರೂರು ಗ್ರಾಮದ ಸರ್ವೇ ನಂ. 106 ಹಾಗೂ 171 ರಲ್ಲಿ ಹಂಚಿಕೆ ಮಾಡಲಾಗಿದೆ ಎಂದು ಹೇಳಲಾದ ನಿವೇಶನಗಳ ಮಂಜೂರಾತಿಯನ್ನು

ರದ್ದುಗೊಳಿಸಿ, ಸದರಿ ಜಾಗವನ್ನು ಸರ್ಕಾರಕ್ಕೆ ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಜರುಗಿಸಿ, ಸದರಿ ಜಾಗವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವು ಸೂಕ್ತವೆಂದು ಕಂಡು ಬರುತ್ತದೆ.

**10.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು, ಬ್ರಹ್ಮಾವರ ಹೋಬಳಿ ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹೇರೂರು ಗ್ರಾಮದ ಸರ್ವೇ ನಂ. 106 ಹಾಗೂ 171 ರಲ್ಲಿ ಹಂಚಿಕೆ ಮಾಡಲಾಗಿದೆ ಎಂದು ಹೇಳಲಾದ ನಿವೇಶನಗಳ ಮಂಜೂರಾತಿಯನ್ನು ರದ್ದುಗೊಳಿಸಿ, ಸದರಿ ಜಾಗವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು, ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 22/2/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 22/2/17